ಮೀಸಲಾತಿ ಸೌಲಭ್ಯ ಬಳಸಿಕೊಳ್ಳುತ್ತಲೇ ಹೋಗಬಾರದು, ಇತರ ದಲಿತರಿಗೆ ಅವಕಾಶ ಮಾಡಿಕೊಡಬೇಕು ಎನ್ನುವುದು ರಂಗನಾಥರ ನಿಲುವು. ಅವರ ಹೆಂಡತಿ, ಮಕ್ಕಳಿಗೆ ಮೀಸಲಾತಿ ಕೊಡುವ ಹಕ್ಕಿನ ಸವಲತ್ತು, ಸಾಧ್ಯವಿದ್ದಷ್ಟೂ ಕಡೆ ಬಳಸಿಕೊಳ್ಳಬೇಕು ಎನ್ನುವವರು. ತನ್ನದೇ ಕುಟುಂಬದವರೊಂದಿಗೆ ಜಗಳ ಬೇಡ ಎಂದು ನಿರ್ಧರಿಸಿ ವಾಪಸ್ಸು ಇಲ್ಲಿಗೇ ಬಂದು ಸೇರಿಕೊಂಡಿದ್ದಾರೆ. ಒಮ್ಮೆ ಭೇಟಿಯಾಗಿ' ಅಂದರು ಮಾಸ್ತರರು.

ದಾಮೋದರರಿಗೆ ಮಾಸ್ತರರ ಸಲಹೆಯೂ ಸಾಧು ಅನ್ನಿಸಿತು. ರಂಗನಾಥರು ಹೆಡ್ ಮಾಸ್ತರರಾಗಿ ಅಪಾರ ಮನ್ನಣೆ ಗಳಿಸಿದವರು. ಮೇಲಾಗಿ ದಲಿತರಾದುದರಿಂದ ಆಯ್ಕೆ ಸಮಿತಿಯಲ್ಲಿಯೂ ಯಾರೂ ತಕರಾರು ಎತ್ತುವುದಿಲ್ಲ. ತಾನು ಕಲಿತ ಶಾಲೆಯ ಶಿಕ್ಷಕರಿಗೆ ಪ್ರಶಸ್ತಿ ಕೊಡಿಸಲು ಹೊರಟ ತನ್ನ ಕೀರ್ತಿಗೂ ಕುಂದಿಲ್ಲ!

'ಸರಿ ಸಾರ್. ಅವರಲ್ಲೂ ಕೇಳಿನೋಡುತ್ತೇನೆ' ಎಂದು ಅಲ್ಲಿಂದ ಹೊರಟ ದಾಮೋದರ್ ಶಾಲೆಯ ಬಳಿ ಬಂದು ರಂಗನಾಥರನ್ನೂ ಸಂಪರ್ಕಿಸಿದರು.

ಪೂರ್ತಿ ವಿಷಯ ಕೇಳಿಸಿಕೊಂಡ ರಂಗನಾಥರು ನಸುನಕ್ಕು, 'ಗಣೇಶ ಮಾಸ್ತರರಿಗೆ ತಲೆಸರಿಯಿಲ್ಲ. ಅವರಿಗಿಂತ ಯಾವ ನೆಲೆಯಲ್ಲಿ ನಾನು ಹೆಚ್ಚು ಅರ್ಹ? ಅವರು ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ಪಠ್ಯಗಳಲ್ಲಿ ಹೆಸರು ಪಡೆದ ಶಿಕ್ಷಕ. ನಾನು ಕಳುಹಿಸಿದ ಅಷ್ಟೂ ಮಕ್ಕಳನ್ನು ಪಾಸು ಮಾಡಿಸಿದ್ದಾರೆ. ಪ್ರಶಸ್ತಿ ಇರುವುದು ಶಿಕ್ಷಕರಿಗೆ ತಾನೇ? ನಾನೇನಿದ್ದರೂ ಹೆಡ್ ಮಾಸ್ತರ್ ಅಂದ್ರೆ ಆಫೀಸು ನೋಡಿಕೊಳ್ಳುವವ' ಎಂದು ನಗೆಯಾಡಿ ಸ್ವಲ್ಪ ಹೊತ್ತು ನಕ್ಕು ಮತ್ತೆ 'ವಿಮರ್ಶಿಸಿ ನೋಡಿದರೆ ಉತ್ತಮ ಶಿಕ್ಷಕ ಪ್ರಶಸ್ತಿಯೇ ಸರಿಯಲ್ಲ. ರಾಜ್ಯದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಉತ್ತಮ ಶಿಕ್ಷಕರಿರುವಾಗ ಹತ್ತು ಮಂದಿಯನ್ನು ಕರೆದು ನೀವು ಉತ್ತಮ ಶಿಕ್ಷಕರು ಎನ್ನುವುದು ಯಾವ ನ್ಯಾಯ? ಎಲ್ಲ ಕಣ್ಣುಕಟ್ಟು. ನನಗೆ ಬೇಡವೇ ಬೇಡ' ಅಂದರು.

'ಸರಕಾರ ಏನೋ ಉದ್ದೇಶದಿಂದ ಮಾಡಿರುವ ಯೋಜನೆಗಳು... ಪ್ರಶಸ್ತಿ ಕೊಡುತ್ತಾರೆ. ನಾನೀಗ ಅಲ್ಲಿ ಕನಿಷ್ಠ ಒಬ್ಬರಿಗೆ ಪ್ರಶಸ್ತಿ ಕೊಡಿಸಬಲ್ಲ ಹುದ್ದೆಯಲ್ಲಿದ್ದೇನೆ. ನೀವೊಂದು ಅರ್ಜಿ ಕೊಟ್ಟರೆ ಸಾಕು. ಪ್ರಶಸ್ತಿ ಸಿಕ್ಕಿದರೆ ನನ್ನಂತಹ ನಿಮ್ಮ ಸಾವಿರಾರು ವಿದ್ಯಾರ್ಥಿಗಳಿಗೆ ಸಂತೋಷವಾಗುತ್ತದೆ' ಅಂದರು ದಾಮೋದರ್.

'ದಾಮೋದರ್, ನಮ್ಮ ವಿದ್ಯಾರ್ಥಿಯಾದ ನೀವು ದೊಡ್ಡ ಹುದ್ದೆಯಲ್ಲಿದ್ದೇನೆ ಅಂದದ್ದೇ ನನಗೆ ಸಿಕ್ಕಿದ ದೊಡ್ಡ ಪ್ರಶಸ್ತಿ. ಇಂತಹ ಹಲವಾರು ಪ್ರಶಸ್ತಿಗಳು ನಮ್ಮ ವಿದ್ಯಾರ್ಥಿಗಳಿಂದ ದೊರಕಿವೆ, ದೊರಕುತ್ತಲೇ ಇವೆ. ಎಲ್ಲೋ ಕೊಂಪೆಯಲ್ಲಿ ಗಂಜಿಗೂ ಗತಿಯಿಲ್ಲದೇ ಇದ್ದ ನನಗೆ ಮೀಸಲಾತಿ ಕೊಟ್ಟು ಸಹಾಯ ಮಾಡಿ, ಶಿಕ್ಷಕನನ್ನಾಗಿಸಿ ಅನ್ನಕೊಟ್ಟ ಸರ್ಕಾರಕ್ಕೆ ನಾನು ಸದಾ ಋಣಿ. ಸರ್ಕಾರದಿಂದ ನಾನು ಪಡೆದದ್ದನ್ನು ಸಮಾಜಕ್ಕೆ ಮರಳಿ ಕೊಡಬೇಕು. ದಲಿತ ಮಕ್ಕಳಿಗೆಲ್ಲ ಶಿಕ್ಷಣ ಕೊಡಿಸಬೇಕು, ಅನ್ನದ ದಾರಿ ತೋರಿಸಬೇಕು ಎನ್ನುವುದರಲ್ಲಿ ಮಾತ್ರ ನನಗೆ ಆಸಕ್ತಿ. ಗಣೇಶ ಮಾಸ್ತರರು ಹೇಳಿದ 'ಇವತ್ತು ಬದುಕಿದ ಬದುಕು' ಬಹು ಅಮೂಲ್ಯ ಫಿಲಾಸಫಿ. ನನಗೂ ಇವತ್ತಿನದೇ ಧ್ಯಾನ. ಆದರೆ ಬೇರೆ ದೃಷ್ಟಿಕೋನದಲ್ಲಿ. ಇವತ್ತು ನಾನು ಏನೇನು ಮಾಡಬಹುದಿತ್ತು, ಅದರಲ್ಲಿ ನಾನು ಏನೇನು ಮಾಡಲು ಶಕ್ತನಾದೆ ಎನ್ನುವ ತುಲನೆಯಲ್ಲಿ ನನ್ನ ಸಂತೋಷವೂ ದುಃಖವೂ ಅಡಗಿದೆ. ಎಪ್ಪತ್ತು ವರ್ಷಗಳ ಮೀಸಲಾತಿಯ ಬೆಂಬಲದೊಂದಿಗೆ ನಾವು ಸರಿದಾರಿಯಲ್ಲಿ ಸಾಗಿದ್ದರೆ ಇವತ್ತು ಮೀಸಲಾತಿಯ ಅಗತ್ಯ ಯಾವ ದಲಿತನಿಗೂ ಇರುತ್ತಿರಲಿಲ್ಲ. ಸರಿಯಾದ ಶಿಕ್ಷಣವಿಲ್ಲದೆ ಎಸ್ಸೆಸ್ಸೆಲ್ಸಿಗೂ ಕಡಿಮೆ ವಿದ್ಯಾರ್ಹತೆ ಬೇಕಿರುವ ಗ್ರೂಪ್ ಡಿ ನೌಕರಿಗಳಿಗೆ